# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು** | **ಪಿಎಸ್ಐ ಪತ್ರಿಕೆ – 1** | **ಪ್ರಶ್ನೆಗಳು**

ನೊಂದಣಿ ಸಂಖ್ಯೆ :

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಅಂಕಗಳು : 100**

ಹೆಸರು :

ಮೊಬೈಲ್ ನಂ :

**21-02-2021**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ಜನಸಂಖ್ಯಾ ಲಾಭಾಂಶ ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿರಿ.

ಅಥವಾ

2. ಚುನಾವಣಾ ಸುಧಾರಣೆಯ ಅಗತ್ಯತೆಯ ಕುರಿತು ವಿಶ್ಲೇಷಿಸಿರಿ.

ಅಥವಾ

3. ರಾಷ್ಟ್ರದ ಅಭಿವೃದ್ಧಿಯಲ್ಲಿ ಕೃಷಿಯ ಪಾತ್ರ ಹಾಗೂ ಇತ್ತೀಚಿನ ಕೃಷಿಯ ಬಿಕ್ಕಟು ಕುರಿತು ಚರ್ಚಿಸಿರಿ.

ಅಥವಾ

4. ಉತ್ತಮ ಆಡಳಿತದ ಪರಿಕಲ್ಪನೆ ಹಾಗೂ ಅದರ ಕುರಿತು ವಿವರಿಸಿರಿ

ಅಥವಾ

5. ಸೂಪರ್ ಪವರ್ – 2020 ಭಾರತ

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

'ಇಂಡಿಯಾ ಬದಲು ಭಾರತ' : ಹೆಸರು ಬದಲಾಯಿಸಲು ಕೋರಿದ ಅರ್ಜಿ : ವಿಚಾರಣೆಗೆ ಕೋರ್ಟ; ನಿರಾಕರಣೆ ಅರ್ಜಿ ವಜಾಗೊಳಿಸಿದ ಸುಪ್ರೀಂ ಕೋರ್ಟ :

ದೇಶದ ಹೆಸರನ್ನು ಅಧಿಕೃತವಾಗಿ ಭಾರತ ಎಂದು ಬದಲಾಯಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಬುಧವಾರ **3–6–2020** ರಂದು ನಿರಾಕರಿಸಿದ್ದು, ನಿಮ್ಮ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುವಂತೆ ನ್ಯಾಯಾಲವು ಅರ್ಜಿದಾರರಿಗೆ ಸೂಚಿಸದೇ ಬರೆಯಲಾಗಿದೆ, ಎಂದು ಕೋರ್ಟ್ ಹೇಳಿದೆ. ಇಂಡಿಯಾ ಎಂಬುದು ಗ್ರೀಕ್ ಪದದಿಂದ ಬಂದಿದ್ದು ಅದನ್ನು ಬದಲಾಯಿಸುವಂತೆ ಕೋರಿ ನಮಃ ಎಂಬುವರು ಅರ್ಜಿ ಸಲ್ಲಿಸಿದ್ದರು.

ದೇಶದ ಹೆಸರನ್ನು ಇಂಡಿಯಾ ಎಂಬ ಶಬ್ದದ ಬದಲು ಭಾರತ ಎಂದು ಬದಲಾಯಿಸಬೇಕೆಂದು ಕೋರಿ ಸಲ್ಲಿಸಿದ ಅರ್ಜಿಯನ್ನು ತಳ್ಳಿಹಾಕಿರುವ ಸುಪ್ರೀಂಕೋರ್ಟ್, ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದೆ. ಆಂಗ್ಲ ಭಾಷೆಯಲ್ಲೂ ಇಂಡಿಯಾ ಬದಲು ಭಾರತ ಅಥವಾ ಹಿಂದುಸ್ಥಾನ ಎಂದು ಮಾರ್ಪಡಿಸುವಂತೆ ಕೇಂದ್ರ ಸರ್ಕಾಕ್ಕೆ ಸೂಚನೆ ನೀಡಬೇಕೆಂದು ಕೋರಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಕೇಂದ್ರ ಸರಕಾರ ಈ ಅರ್ಜಿಯನ್ನು ನಿವೇದನೆ ಎಂದು ಪರಿಗಣಿಸಿ ಪರಿಶೀಲಿಸಬಹುದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾದೀಶ ಎಸ್. ಎ. ಬೊಬ್ಡೆ ಹೇಳಿದ್ದಾರೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III.** ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.

**Translate the following paragraph from English to Kannada.**

**Values can be viewed from the standpoint of their importance. All values are experiences of different degrees of importance in the development of individuality. So we classify values on the basis of importance of these values have.**

**An intrinsic value in on which has worth in its own right. It is an End-in-Itself. Truth, Beauty, Goodness temperance, courage etc., They are good not because of their consequence but because they are good in themselves. An extrinsic value is one which is a means to some other values. A pair of spectacle is good only if there are eyes behind to see through them. It is of Instrumental worth only. They are means to an end.**

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ರಾಷ್ಟ್ರಧ್ವಜ ಸತ್ಯಾಗ್ರಹದಿಂದ ಆದ ಮಹತ್ವದ ಸಾಧನೆಯೆಂದರೆ, ಜಾತೀಮತ, ಧರ್ಮಗಳ ಭೇದವಿಲ್ಲದೇ ಪ್ರತಿಯೊಬ್ಬ ಭಾರತೀಯನೂ ತನ್ನ ಪ್ರಾಣ ತ್ಯಾಗ ಮಾಡಲು ಸಿದ್ಧವಿರುವಂತಹ ಮಾನ್ಯತೆಯ ರಾಷ್ಟ್ರಧ್ವಜ ನೀಡಿದುದು. ಅದು ಜನರ ಮನ ಕುಲಕಿ, ದೇಶಭಕ್ತಿ ಗೀತೆಗಳ ರೂಪದಲ್ಲಿ ಹೊರಹೊಮ್ಮಿತು. 1924 ರಲ್ಲಿ ಬೆಳಗಾವಿ ಕಾಂಗ್ರೆಸ್‌ನ ವೇಳೆ ಸೇವಾದಳ, ತ್ರಿವರ್ಣ ಧ್ವಜಕ್ಕೆ ಗೌರವ ಸಲ್ಲಿಸುವುದಕ್ಕಾಗಿ ರಾಷ್ಟ್ರಧ್ವಜ ಸಮಾರಂಭ ಅಥವಾ ರಾಷ್ಟ್ರಧ್ವಜ ವಂದನೆ ಕಾರ್ಯಕ್ರಮ ಏರ್ಪಡಿಸಿತು. ಅದು ಅತೀ ಶೀಘ್ರದಲ್ಲಿ ಎಲ್ಲ ಕಾಂಗ್ರೆಸ್ ಸಮಾರಂಭಗಳ ಒಂದು ಅಂಗವಾಯಿತು.

ರಾಷ್ಟ್ರಧ್ವಜ ವಂದನೆಗೆ ಸಮಯೋಚಿತವೆನಿಸುವಂತೆ ಉತ್ತರ ಪ್ರದೇಶ ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ಶ್ರೀ ಶಾಮಲಾಲ್ ಗುಪ್ತ 'ವಿಜಯಿ ವಿಶ್ವ ತರಂಗ ಪ್ಯಾರಾ, ಝಂಡಾ ಉಂಚಾ ರಹೇ ಹಮಾರಾ' ಎಂದು ಹಾಡು ರಚಿಸಿದರು. 1924 ರಲಿ ಕಾನ್‌ಪುರ್‌ನಲ್ಲಿ ನಡೆದ ಕಾಂಗ್ರೆಸ್ ಹಾಡಿದರು. ಈ ಹಾಡು ಹೆಚ್ಚು ಜನಪ್ರಿಯತೆ ಪಡೆದು, ನಂತರ ದಿನಗಲ್ಲಿ ಪ್ರತಿ ಧ್ವಜ ವಂದನೆ ಸಮಾರಂಭದಲ್ಲಿ ಅದನ್ನು ಹಾಡಲಾಯಿತು. ಅದಕ್ಕೆ ರಾಷ್ಟ್ರಧ್ವಜ ವಂದನೆ ಅಥವಾ ರಾಷ್ಟ್ರಧ್ವಜ ಗೀತೆ ಹಾಡಿನ ಸ್ಥಾನಮಾನ ದೊರಕಿತು. ಇದು ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದ್ದವು. ಇಡೀ ದೇಶದ ವಿಶೇಷವಾಗಿ ನಾಗಪುರದ ಜನರ ಬಲಿ ತೆತ್ತು ಬಳಸಿದ ತ್ರಿವರ್ಣ ಧ್ವಜದ ಆಶ್ರಯದಲ್ಲಿ ಹಲವು ಪ್ರಮುಖ ಘಟನೆಗಳು ನಡೆದವು.

ವಿದ್ಯಾಕಾಶಿ ಕರಿಯರ್ ಅಕಾಡೆಮಿ